**Akashvani : Bangalore**
**National Bulletin In Kannada**
**16.04.2025 / 7.35 am**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

**೧. ಕೇಂದ್ರ ಸರ್ಕಾರದ ನೀತಿಗಳಲ್ಲಿ ಈಶಾನ್ಯ ಪ್ರದೇಶಗಳಿಗೆ ಆದ್ಯತೆ; ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್**

**೨. ಭಾರತ- ಡೆನ್ಮಾರ್ಕ್ ದ್ವಿಪಕ್ಷೀಯ ಸಹಕಾರ ಬಲವರ್ಧನೆಗೆ ಪ್ರಧಾನಿ ನರೇಂದ್ರ ಮೋದಿ ಡೆನ್ಮಾರ್ಕ್ ಸಹವರ್ತಿಯೊಂದಿಗೆ ಮಾತುಕತೆ**

**೩. ವೇವ್ಸ್ ಆನಿಮೆ ಮತ್ತು ಮಾಂಗಾ ಸ್ಪರ್ಧೆಯ ರಾಜ್ಯ ಮಟ್ಟದ ಅರ್ಹತಾ ಸುತ್ತು ಬೆಂಗಳೂರಿನಲ್ಲಿ ಸಂಪನ್ನ**

**೪. ಐಪಿಎಲ್ ಟಿ-೨೦ ಕ್ರಿಕೆಟ್; ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಪಂಜಾಬ್ ಕಿಂಗ್ಸ್ ತಂಡಕ್ಕೆ ೧೬ ರನ್‌ಗಳ ಜಯ**

**<><*<><>*><>**

ಈಶಾನ್ಯ ಪ್ರದೇಶ ನೆರೆಹೊರೆ ಮೊದಲು, ಆಕ್ಟ್ ಈಸ್ಟ್ ಮತ್ತು ಬಿಮ್‌ಸ್ಟೆಕ್‌ನಂತಹ ಅನೇಕ ಪ್ರಮುಖ ಭಾರತೀಯ ನೀತಿಗಳ ಕೇಂದ್ರಬಿಂದುವಾಗಿದೆ. ಈ ಪ್ರದೇಶದ ಪ್ರಸ್ತುತತೆ ಕಾಲಕ್ರಮೇಣ ಬೆಳೆಯಲಿದೆ ಎಂದು ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ಈಶಾನ್ಯ ಹೂಡಿಕೆದಾರರ ಶೃಂಗಸಭೆ ೨೦೨೫ ಕ್ಕೆ ಪೂರ್ವಭಾವಿಯಾಗಿ ನಿನ್ನೆ ಈಶಾನ್ಯ ಪ್ರದೇಶದ ಅಭಿವೃದ್ಧಿ ಸಚಿವಾಲಯ ಆಯೋಜಿಸಿದ್ದ ರಾಯಭಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.  ವಿದೇಶಿ ರಾಯಭಾರಿಗಳು ಈಶಾನ್ಯ ಪ್ರದೇಶವನ್ನು ಅನ್ವೇಷಿಸಿ, ತಮ್ಮ ಸರ್ಕಾರ ಮತ್ತು ಉದ್ಯಮಗಳೊಂದಿಗೆ ಈ ಪ್ರದೇಶದ ಸಾಮರ್ಥ್ಯದ ಕುರಿತು ಮಾಹಿತಿ ಹಂಚಿಕೊಂಡು ಉತ್ತೇಜಿಸಲು ಡಾ.ಎಸ್.ಜೈಶಂಕರ್ ಕರೆ ನೀಡಿದರು.  ಈಶಾನ್ಯ ಪ್ರದೇಶ, ಐದು ನೆರೆಯ ದೇಶಗಳೊಂದಿಗೆ ಗಡಿಗಳನ್ನು ಹಂಚಿಕೊಂಡಿದ್ದು, ಭಾರತೀಯ ಉಪಖಂಡ ಹಾಗೂ ಆಸಿಯಾನ್ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಅವರು ತಿಳಿಸಿದರು.

**<><*<><>*><>**

ಪ್ರಧಾನಿ ನರೇಂದ್ರ ಮೋದಿ ನಿನ್ನೆ ತಮ್ಮ ಡೆನ್ಮಾರ್ಕ್ ಸಹವರ್ತಿ ಮೆಟ್ಟೆ ಫ್ರೆಡೆರಿಕ್ಸೆನ್ ಅವರೊಂದಿಗೆ ಮಾತುಕತೆ ನಡೆಸಿದರು.  ದೂರವಾಣಿ ಮೂಲಕ ನಡೆದ ಸಂಭಾಷಣೆಯಲ್ಲಿ ಉಭಯ ನಾಯಕರು, ಭಾರತ-ಡೆನ್ಮಾರ್ಕ್ ನಡುವಿನ ಹಸಿರು ಕಾರ್ಯತಂತ್ರದ ಪಾಲುದಾರಿಕೆಗೆ ತಮ್ಮ ಬಲವಾದ ಬೆಂಬಲವನ್ನು ಪುನರುಚ್ಚರಿಸಿದರು. ಉಭಯ ದೇಶಗಳ ಜನರು ಹಿತಾಸಕ್ತಿಗಾಗಿ ವಿವಿಧ ವಲಯಗಳಲ್ಲಿ ಸಹಕಾರ ಬಲವರ್ಧನೆ ಕುರಿತು ಚರ್ಚೆ ನಡೆಯಿತು.  ೨೦೨೦ ರಲ್ಲಿ ಹಸಿರು ಕಾರ್ಯತಂತ್ರದ ಪಾಲುದಾರಿಕೆ ಪ್ರಾರಂಭವಾದಾಗಿನಿಂದ ಎರಡೂ ದೇಶಗಳ ನಡುವಿನ ಉನ್ನತ ಮಟ್ಟದ ವಿನಿಮಯಗಳನ್ನು ಸ್ಮರಿಸಿದ ನಾಯಕರು, ವಿವಿಧ ಕ್ಷೇತ್ರಗಳಲ್ಲಿ ಹಸಿರು ಕಾರ್ಯತಂತ್ರದ ಪಾಲುದಾರಿಕೆಯ ವಿಸ್ತರಣೆ, ಭಾರತದಲ್ಲಿ ಹಸಿರು ಪರಿವರ್ತನೆಗೆ ಡೆನ್ಮಾರ್ಕ್‌ನ ಹೂಡಿಕೆಗಳು ಕೊಡುಗೆ ನೀಡಲು ಅನುಕೂಲಕರ ಪರಿಸ್ಥಿತಿಗಳನ್ನು ಸೃಷ್ಟಿಸಿದೆ ಎಂದು ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡರು. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ, ಈ ವರ್ಷದ ಕೊನೆಯಲ್ಲಿ ನಾರ್ವೆಯಲ್ಲಿ ನಡೆಯಲಿರುವ ೩ ನೇ ಭಾರತ-ನಾರ್ಡಿಕ್ ಶೃಂಗಸಭೆಯನ್ನು ಎದುರು ನೋಡುತ್ತಿರುವುದಾಗಿ ತಿಳಿಸಿದರು.

<><*<><>*><>

ವೇವ್ಸ್ ಆನಿಮೆ ಮತ್ತು ಮಾಂಗಾ ಸ್ಪರ್ಧೆಯ ರಾಜ್ಯ ಮಟ್ಟದ ಅರ್ಹತಾ ಸುತ್ತಿನ ಸ್ಪರ್ಧಿಗಳನ್ನು ಆಯ್ಕೆ ಮಾಡಲು, ಭಾರತೀಯ ಸಂವಹನ ಮತ್ತು ಮನರಂಜನಾ ಸಂಘ, ಬೆಂಗಳೂರಿನ ಬಸವನಗುಡಿಯ ವಿವಿಎನ್ ಪದವಿ ಕಾಲೇಜಿನಲ್ಲಿ ನಿನ್ನೆ ಡಬ್ಲ್ಯೂಎಎಂ ಅಂದರೆ ವೇವ್ಸ್ ಆನಿಮೆ ಮತ್ತು ಮಾಂಗಾ ಸ್ಪರ್ಧೆ ಆಯೋಜಿಸಿತ್ತು. ಇದರಡಿ ನಡೆದ ಮಾಂಗಾ ವಿದ್ಯಾರ್ಥಿ ವಿಭಾಗದ ಸ್ಪರ್ಧೆಯಲ್ಲಿ ರೋಹಿತ್ ಶರ್ಮಾ, ವೃತ್ತಿಪರ ವಿಭಾಗದಲ್ಲಿ ಮುಕುಂದ.ಕೆ, ವೆಬ್ಟೂನ್ ಸ್ಪರ್ದೆಯಲ್ಲಿ ವಿಶಾಲ್ ಮರವೀ, ಆನಿಮೆ ಸ್ಪರ್ಧೆಯಲ್ಲಿ ಗಣೇಶ್ ವಿಜೇತರಾಗಿದ್ದಾರೆ. ವೇಷಧಾರಣೆಯುಳ್ಳ ಪ್ರದರ್ಶನದಲ್ಲಿ ಪುನೀತ್.ವಿ- ಪ್ರಥಮ, ಪ್ರೇರಣ- ದ್ವಿತೀಯ, ಶೆರೋನ್ ಡಿಸೋಜಾ- ತೃತೀಯ ಸ್ಥಾನ ಗಳಿಸಿದ್ದಾರೆ. ಇನ್ನು ಧ್ವನಿ ಅಭಿನಯ ಸ್ಪರ್ಧೆಯಲ್ಲಿ ಪೂನಂ ತ್ರಿಪಾಠಿ- ಪ್ರಥಮ ಹಾಗೂ ಶೆರೋನ್ ಡಿಸೋಜಾ ದ್ವಿತೀಯ ಸ್ಥಾನ ಪಡೆದಿದ್ದಾರೆ. ೧೨೧ ಸ್ಪರ್ಧಿಗಳ ಭಾಗವಹಿಸುವಿಕೆಗೆ ಸಾಕ್ಷಿಯಾದ ಈ ಅರ್ಹತಾ ಸುತ್ತಿನಲ್ಲಿ ವಿಜೇತರಾದವರು ಮುಂಬೈನಲ್ಲಿ ವೇವ್ಸ್ - ೨೦೨೫ರ ವೇಳೆ ನಡೆಯುವ ಡಬ್ಲ್ಯೂಎಎಂ ರಾಷ್ಟ್ರೀಯ ಅಂತಿಮ ಸುತ್ತಿನಲ್ಲಿ ಭಾಗವಹಿಸಲಿದ್ದಾರೆ. ಅರ್ಹತಾ ಸುತ್ತಿನ ಸ್ಪರ್ಧೆಯಲ್ಲಿ ರಾಯಪುರ, ಚೆನ್ನೈ ಸೇರಿದಂತೆ ವಿವಿಧ ನಗರಗಳ ಸೃಜನಶೀಲರು ಮತ್ತು ವೇಷಧಾರಣೆ ಕಲಾವಿದರು ಭಾಗವಹಿಸಿದ್ದರು. ವೇವ್ಸ್ ಆನಿಮೆ ಮತ್ತು ಮಾಂಗಾ ಸ್ಪರ್ಧೆಯ ವಿಜೇತರು, ವ್ಯಾಕೊಮ್ ಪೆನ್ ಟ್ಯಾಬ್ಲೆಟ್‌ಗಳು, ಫೇಬರ್-ಕ್ಯಾಸ್ಟೆಲ್ ಆರ್ಟ್ ಗುಡೀಸ್, ನಗದು ಬಹುಮಾನಗಳನ್ನು ಪಡೆದರು. ಇದರ ಜೊತೆಗೆ ರಾಷ್ಟ್ರೀಯ ಚಾಂಪಿಯನ್‌ಗಳು ಟೋಕಿಯೊದಲ್ಲಿ ನಡೆಯುವ ಅನಿಮೆ ಜಪಾನ್ ೨೦೨೬ ಯಾವುದೇ ವೆಚ್ಚವನ್ನು ಪಾವತಿಸದೇ ಪ್ರವಾಸ ಬೆಳೆಸಿ ಭಾಗವಹಿಸಲು ಅವಕಾಶ ಗಳಿಸುತ್ತಾರೆ. ಆ ಮೂಲಕ ವಿಶ್ವದ ಅತಿದೊಡ್ಡ ಆನಿಮೆ ವೇದಿಕೆಯಲ್ಲಿ ಭಾರತವನ್ನು ಪ್ರತಿನಿಧಿಸುತ್ತಾರೆ. ಕಾರ್ಯಕ್ರಮದ ವೇಳೆ ನಗರದ ಆನಿಮೆ ಮತ್ತು ಮಾಂಗಾ ಅಭಿಮಾನಿಗಳಿಗಾಗಿ ಸ್ಥಪಿಸಲಾದ ಸಮುದಾ ಆಧಾರಿತ ಆನಿಮೆ ಬೆಂಗಳೂರು ಕ್ಲಬ್ ಅನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದ ಕುರಿತು ಮಾತನಾಡಿದ ಭಾರತೀಯ ಸಂವಹನ ಮತ್ತು ಮನರಂಜನಾ ಸಂಘದ ಕಾರ್ಯದರ್ಶಿ ಅಂಕುರ್ ಭಾಸಿನ್, ಈ ಯಶಸ್ವಿ ಸ್ಪರ್ಧೆಯ ಆಯೋಜನೆಯ ಮೂಲಕ ಮತ್ತು ಸ್ಪರ್ಧಾಳುಗಳು ತೋರಿದ ಪ್ರದರ್ಶನದ ಮೂಲಕ ಬೆಂಗಳೂರು ಮತ್ತೊಮ್ಮೆ ಭವಿಷ್ಯದ ರಚನಾಕಾರರ ಕೇಂದ್ರ ಎಂದು ಸಾಭೀತು ಪಡಿಸಿದೆ. ಈ ಕಾರ್ಯಕ್ರಮದಲ್ಲಿ ೯ ವರ್ಷದ ಮಕ್ಕಳಿಂದ ಹಿಡಿದು ವೃತ್ತಿಪರರು ಪಾಲ್ಗೊಂಡಿದ್ದು, ವಿಶೇಷವಾಗಿತ್ತು. ಈ ರಾಜ್ಯಮಟ್ಟದ ಅರ್ಹತಾ ಸುತ್ತು ಪ್ರತಿಭೆ ಮತ್ತು ಮಿತಿ ಇಲ್ಲದ ಕಲ್ಪನೆಗೆ ವೇದಿಕೆಯಾಗಿ ಕಾರ್ಯ ನಿರ್ವಹಿಸಿತು ಎಂದು ಹೇಳಿದ್ದಾರೆ. ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಸಹಯೋಗದೊಂದಿಗೆ ನಡೆಯುತ್ತಿರುವ ಈ ಸ್ಪರ್ಧೆ ಭಾರತದ ಅತಿದೊಡ್ಡ ಮಾಧ್ಯಮ ಸಂವಹನ ವೇದಿಕೆಯಾದ ವಿಶ್ವ ಶ್ರವಣ-ದೃಶ ಮನೋರಂಜನಾ ಶೃಂಗಸಭೆ - ವೇವ್ಸ್‌ನ ಭಾಗವಾಗಿದೆ.

<><*<><>*><>

ವಕ್ಫ್ ತಿದ್ದುಪಡಿ ಕಾಯ್ದೆ- ೨೦೨೫ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸುವ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಇಂದು ವಿಚಾರಣೆ ನಡೆಸಲಿದೆ. ಸುಪ್ರೀಂ ಕೋರ್ಟ್‌ನ ವೆಬ್‌ಸೈಟ್‌ನಲ್ಲಿ ಪ್ರಕಟವಾದ ಪಟ್ಟಿಯ ಪ್ರಕಾರ, ಭಾರತದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ನೇತೃತ್ವದ ಮತ್ತು ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಕೆ.ವಿ.ವಿಶ್ವನಾಥನ್ ಅವರೊನ್ನೊಳಗೊಂಡ ನ್ಯಾಯಪೀಠ, ಇಂದು ಈ ವಿಷಯವನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲಿದ್ದಾರೆ ಎಂದು ಐಎಎನ್‌ಎಸ್ ಸುದ್ದಿಸಂಸ್ಥೆ ವರದಿ ಮಾಡಿದೆ. ೧೯೯೫ ರ ವಕ್ಫ್ ಕಾಯ್ದೆಯಲ್ಲಿ ಇತ್ತೀಚೆಗೆ ಪರಿಚಯಿಸಲಾದ ತಿದ್ದುಪಡಿಗಳ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ, ಸುಪ್ರೀಂ ಕೋರ್ಟ್‌ಗೆ ಹಲವಾರು ಅರ್ಜಿಗಳು ಸಲ್ಲಿಕೆಯಾಗಿವೆ. ಸಂಸತ್ತು ಜಾರಿಗೆ ತಂದ ವಕ್ಫ್ ತಿದ್ದುಪಡಿ ಕಾಯ್ದೆಯ ಕುರಿತು ಪಾಕಿಸ್ತಾನ ಮಾಡಿದ ಪ್ರೇರಿತ ಮತ್ತು ಆಧಾರರಹಿತ ಹೇಳಿಕೆಗಳನ್ನು ಭಾರತ

ಬಲವಾಗಿ ತಿರಸ್ಕರಿಸಿದೆ.  ವಕ್ಫ್ ಮಸೂದೆಯ ಕುರಿತು ಪಾಕಿಸ್ತಾನ ಹೊರ ಹಾಕಿರುವ ಅಭಿಪ್ರಾಯಗಳ ಕುರಿತು ಮಾಧ್ಯಮ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಭಾರತದ ಆಂತರಿಕ ವಿಷಯದ ಬಗ್ಗೆ ಪ್ರತಿಕ್ರಿಯಿಸಲು ಪಾಕಿಸ್ತಾನಕ್ಕೆ ಯಾವುದೇ ಅರ್ಹತೆ ಇಲ್ಲ. ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವ ವಿಷಯದಲ್ಲಿ ಪಾಕಿಸ್ತಾನವು ಇತರರಿಗೆ ಉಪದೇಶಿಸುವ ಬದಲು ತನ್ನ ಪ್ರದೇಶದ ಪ್ರಸ್ತುತ ಪರಿಸ್ಥಿತಿಯನ್ನು ಅವಲೋಕಿಸುವುದು ಉತ್ತಮ ಎಂದು ಅವರು ಹೇಳಿದ್ದಾರೆ.

**<><*<><>*><>**

೨೦೨೪-೨೫ರ ಹಣಕಾಸು ವರ್ಷದಲ್ಲಿ ದೇಶದ ರಾಷ್ಟ್ರೀಯ ಜಲಮಾರ್ಗಗಳಲ್ಲಿ ಸರಕು-ಸಾಗಣೆ ದಾಖಲೆಯ ಗರಿಷ್ಠ ೧೪೫.೫ ಮಿಲಿಯನ್ ಟನ್‌ಗಳನ್ನು ತಲುಪಿದೆ ಎಂದು ಬಂದರುಗಳು ಹಡಗು ಮತ್ತು ಜಲಮಾರ್ಗಗಳ ಸಚಿವಾಲಯ ತಿಳಿಸಿದೆ. ಕಳೆದ ಹಣಕಾಸು ವರ್ಷದಲ್ಲಿ ರಾಷ್ಟ್ರೀಯ ಜಲಮಾರ್ಗಗಳಲ್ಲಿನ ಸರಕು ಸಾಗಣೆಯು ಶೇಕಡ ೨೦.೮೬ ರ ವಾರ್ಷಿಕ ಬೆಳವಣಿಗೆಯ ದರವನ್ನು ದಾಖಲಿಸಿದೆ. ೨೦೨೫ ರ ಹಣಕಾಸು ವರ್ಷದಲ್ಲಿ, ಸರಕು-ಸಂಚಾರ ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ವರ್ಷದಿಂದ ವರ್ಷಕ್ಕೆ ಶೇಕಡ ೯.೩೪ ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ ಎಂದು ಸಚಿವಾಲಯ ತಿಳಿಸಿದೆ. ಕಲ್ಲಿದ್ದಲು, ಕಬ್ಬಿಣದ ಅದಿರು, ಕಬ್ಬಿಣದ ಅದಿರು ದಂಡಗಳು, ಮರಳು ಮತ್ತು ಹಾರುಬೂದಿಯಂತಹ ಐದು ಪ್ರಮುಖ ಸರಕುಗಳು ರಾಷ್ಟ್ರೀಯ ಜಲಮಾರ್ಗಗಳಲ್ಲಿ ಸಾಗಿಸಲಾದ ಒಟ್ಟು ಸರಕುಗಳಲ್ಲಿ ಶೇಕಡ ೬೮ ಕ್ಕಿಂತ ಹೆಚ್ಚಾಗಿದೆ.

**<><*<><>*><>**

ಅಮೆರಿಕದೊಂದಿಗೆ ಭಾರತದ ವ್ಯಾಪಾರವು ೨೦೩೦ ರ ವೇಳೆಗೆ ೫೦೦ ಶತಕೋಟಿ ಡಾಲರ್‌ಗಳನ್ನು ತಲುಪುವ ನಿರೀಕ್ಷೆಯಿದೆ ಎಂದು ಸರ್ಕಾರ ತಿಳಿಸಿದೆ.  ನವದೆಹಲಿಯಲ್ಲಿ ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಕಾರ್ಯದರ್ಶಿ ಸುನಿಲ್ ಬಾರ್ತ್ವಾಲ್, ಅಮೆರಿಕ ವಿಧಿಸಿರುವ ಪ್ರಸ್ತುತ ಸುಂಕಗಳ ಪರಿಣಾಮ ಭಾರತಕ್ಕೆ ಅನಾನುಕೂಲದ ಜೊತೆಗೆ ಉತ್ತಮ ಅವಕಾಶಗಳೂ ಇವೆ. ಆದಾಗ್ಯೂ, ಭಾರತವು ವ್ಯಾಪಾರ ಉದಾರೀಕರಣದ ಮಾರ್ಗದಲ್ಲಿ ಮುನ್ನಡೆದಿದ್ದು, ಅಮೆರಿಕದೊಂದಿಗೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು ಮುಂದುವರಿಸುತ್ತಿದೆ ಎಂದು ಅವರು ಹೇಳಿದರು.

**<><*<><>*><>**

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆ ಆರೋಪದ ಮೇಲೆ ಕಾಂಗ್ರೆಸ್ ಹಿರಿಯ ನಾಯಕಿ ಸೋನಿಯಾ ಗಾಂಧಿ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಇತರರ ವಿರುದ್ಧ ಜಾರಿ ನಿರ್ದೇಶನಾಲಯ-ಇಡಿ ಆರೋಪಪಟ್ಟಿ ಸಲ್ಲಿಸಿದೆ. ವಿಶೇಷ ನ್ಯಾಯಾಧೀಶ ವಿಶಾಲ್ ಗೋಗ್ನೆ ಆರೋಪಪಟ್ಟಿಯನ್ನು ಪರಿಶೀಲಿಸಿ, ಮುಂದಿನ ವಿಚಾರಣೆಯನ್ನು ಏಪ್ರಿಲ್ ೨೫ ಕ್ಕೆ ಮುಂದೂಡಿದರು. ಆರೋಪಪಟ್ಟಿಯಲ್ಲಿ ಕಾಂಗ್ರೆಸ್ ನಾಯಕರಾದ ಸ್ಯಾಮ್ ಪಿತ್ರೋಡಾ ಮತ್ತು ಸುಮನ್ ದುಬೆ ಅವರನ್ನೂ ಆರೋಪಿಗಳೆಂದು ಹೆಸರಿಸಲಾಗಿದೆ.

**<><*<><>*><>**

ಚಂಡೀಗಢದ ಮಹಾರಾಜ ಯಾದವೀಂದ್ರ ಸಿಂಗ್ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ -ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ  ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಪಂಜಾಬ್ ಕಿಂಗ್ಸ್ ತಂಡ ೧೬ ರನ್‌ಗಳ ಗೆಲುವು ಸಾಧಿಸಿದೆ.  ದೆಹಲಿಯ ಅರುಣ್ ಜೆಟ್ಲಿ ಕ್ರೀಡಾಂಗಣದಲ್ಲಿಂದು ನಡೆಯಲಿರುವ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ರಾಜಸ್ಥಾನ ರಾಯಲ್ಸ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ ಕ್ಕೆ ಆರಂಭವಾಗಲಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ <>*><>**